ತಂದೆಯದು! ನೀನು ಇಲ್ಲಿಗೆ ಹೊಸಬನಂತೆ ಕಾಣಿಸುತ್ತಿದ್ದೀಯ? ನೀನು ಇಲ್ಲಿಗೆ ಬಂದಿರುವ ಉದ್ದೇಶ? ನಿನ್ನ ಆ ಗಡಿಯಾರದ ಸರಪಳಿ ಚಿನ್ನದ್ದೆ?' ಏನೆಲ್ಲಾ ಪ್ರಶ್ನೆಗಳನ್ನು ಕೇಳುತ್ತಿದ್ದ ಹುಡುಗನನ್ನು ಸಾಗ ಹಾಕುಲು ಜಿಮ್ಮಿ ಲಂಚ ಕೊಡಬೇಕಾಯಿತು!

ಜಿಮ್ಮಿ 'ರಾಲ್ಫ್ ಸ್ಪೆನ್ಸರ್' ಎಂಬ ಹೆಸರಿನಿಂದ 'ಪ್ಲ್ಯಾಂಟರ್ಸ್ ಹೋಟೆಲ್'ನಲ್ಲಿ ಒಂದು ರೂಮನ್ನು ಪಡೆದುಕೊಂಡ. 'ನಾನು ಇಲ್ಲೊಂದು ಪಾದರಕ್ಷೆಗಳ ಅಂಗಡಿಯನ್ನು ತೆರೆಯಬೇಕೆಂದುಕೊಂಡಿದ್ದೇನೆ. ನಿಮ್ಮ ಅಭಿಪ್ರಾಯವೇನು?' ಎಂದು ಕೌಂಟರಿನಲ್ಲಿದ್ದ ಗುಮಾಸ್ತನನ್ನು ಕೇಳಿದ.

ಜಿಮ್ಮಿಯ ಯೌವನ, ಸುಸಂಸ್ಕೃತ ನಡವಳಿಕೆ, ಮಾತು ಮತ್ತು ದಿರಿಸು ಗುಮಾಸ್ತನನ್ನು ಆಕರ್ಷಿಸಿತ್ತು. ಅವನೂ ಯುವಕನೇ ಆಗಿದ್ದ. ಅಲ್ಲಿಯ ಹುಡುಗರ ಮಧ್ಯೆ ದೌಲತ್ತಿನಿಂದ ಮೆರೆದಾಡುತ್ತಿದ್ದ. ಜಿಮ್ಮಿಗೆ ತನ್ನನ್ನು ಹೋಲಿಸಿಕೊಂಡಾಗ ಅವನಿಗೆ ನಾಚಿಕೆಯಾಯಿತು. ಜಿಮ್ಮಿ ಕೇಳಿದ ಮಾಹಿತಿಗಳನ್ನೆಲ್ಲಾ ಖುಷಿಯಿಂದಲೇ ಒದಗಿಸಿದ.

ಪಾದರಕ್ಷೆ ವ್ಯಾಪಾರಕ್ಕೆ ಎಲ್ಮೋರಾದಲ್ಲಿ ಒಳ್ಳೆಯ ಅವಕಾಶವಿತ್ತು. ಪಾದರಕ್ಷೆಗಳಿಗಂತಲೇ ಒಂದು ಪ್ರತ್ಯೇಕ ಅಂಗಡಿ ಅಲ್ಲಿರಲಿಲ್ಲ. ಎಲ್ಲಾ ವಸ್ತುಗಳ ಜೊತೆಯಲ್ಲಿ ಪಾದರಕ್ಷೆಗಳನ್ನೂ ಮಾರುತ್ತಿದ್ದರು. ಒಂದು ಒಳ್ಳೆಯ ಅಂಗಡಿಯ ಕೊರತೆ ಇತ್ತು. 'ಇಲ್ಲಿ ಎಲ್ಲರ ಬಳಿಯೂ ದುಡ್ಡಿದೆ. ಊರಿನ ಹವಮಾನವೂ ಚೆನ್ನಾಗಿದೆ. ಯಾವುದೇ ವ್ಯಾಪಾರ ಚೆನ್ನಾಗಿ ನಡೆಯುತ್ತದೆ' ಎಂದು ಗುಮಾಸ್ತ ಹೇಳಿದ. ಕೆಲವು ದಿವಸಗಳು ಇಲ್ಲಿಯೇ ಉಳಿದು ಹೇಗೆ ಏನು ಎಂದು ಪರಿಶೀಲಿಸುತ್ತೇನೆ ಎಂದು ಜಿಮ್ಮಿ ಹೇಳಿದ. ರೂಮಿಗೆ ಹೊರಡುವಾಗ, ಸೂಟ್‌ಕೇಸನ್ನು ತಾನೇ ತೆಗೆದುಕೊಂಡು ಹೋಗುತ್ತೇನೆ, ಹುಡುಗನ ಅಗತ್ಯವಿಲ್ಲ ಎಂದ.

ಬೂದಿಯಿಂದ ಎದ್ದು ಬಂದ ಫೀನಿಕ್ಸ್ ಪಕ್ಷಿ ಜಿಮ್ಮಿ ವ್ಯಾಲೆಂಟಿನ್ ಈಗ ರಾಲ್ಫ್ ಸ್ಪೆನ್ಸರ್ ಆಗಿ ಬದಲಾಗಿದ್ದ. ಅವನು ಎಲ್ಮೋರಾದಲ್ಲಿ ಪಾದರಕ್ಷೆಗಳ ಅಂಗಡಿಯಿಟ್ಟ. ಒಂದು ಹುಡುಗಿಯ ಮೋಹಕ್ಕೆ ಸಿಕ್ಕು ಹಳೆಯ ಜಿಮ್ ವ್ಯಾಲೆಂಟಿನ್ ಭಸ್ಮನಾಗಿದ್ದ. ಈಗ ಎಲ್ಮೋರದ ದೊಡ್ಡ ಪಾದರಕ್ಷೆ ವ್ಯಾಪಾರಿಯಾಗಿದ್ದ.

ಸಾಮಾಜಿಕ ರಂಗದಲ್ಲಿ ಅವನಿಗೊಂದು ಹೆಸರು ಲಭಿಸಿತು. ಜಿಮ್ಮಿ ಎಲ್ಮೋರಾದಲ್ಲಿ ಒಬ್ಬ ಗಣ್ಯ ವ್ಯಕ್ತಿಯಾದ. ಅವನ ಸ್ನೇಹಿತರ ವಲಯವೂ ವಿಸ್ತಾರಗೊಂಡಂತೆ ಆನ್ನಾಬೆಲ್ ಆಡಮ್ಸಳನ್ನು ಭೇಟ್ಟಿಯಾಗುವ ಅವಕಾಶವೂ ಒದಗಿ ಬಂತು. ದಿನಗಳು ಉರುಳಿದಂತೆ ಅವನು ಅವಳ ಮೋಹಪಾಶದಲ್ಲಿ ಸಿಲುಕುತ್ತಾ ಹೋದ.

ಒಂದು ವರ್ಷ ಕಳೆದೇ ಹೋಯಿತು. ರಾಲ್ಫ್ ಸೆನ್ಸರ್ ಈಗ ಎಲ್ಮೋರಾದಲ್ಲಿ ದೊಡ್ಡ ಮನುಷ್ಯ. ಆನ್ನಾಳೊಂದಿಗೆ ಅವನ ನಿಶ್ಚಿತಾರ್ಥವೂ ಆಯಿತು. ಮುಂದಿನ ಎರಡುವಾರಗಳಲ್ಲಿ ಅವರ ಮದುವೆ. ಆನ್ನಾಬೆಲಾಳ ತಂದೆ ಮಿಸ್ಟರ್ ಆಡಮ್ಸ್, ಹಳೆಕಾಲದ ಸಂಪ್ರದಾಯಸ್ಥ ಮನೆತನದವನು. ಭಾವೀ ಅಳಿಯನನ್ನು ತುಂಬಾ ಗೌರವಿಸುತ್ತಿದ್ದ. ಜಿಮ್ಮಿ ಈಗಾಗಲೇ ಅವರ ಮನೆಯ ಒಬ್ಬ ಸದಸ್ಯನಂತಾಗಿ ಹೋಗಿದ್ದ.

ಒಂದು ದಿನ ಜಿಮ್ಮಿ ಸೆಂಯ್ಟ್ ಲೂಯಿಸ್‌ನ ತನ್ನ ಆಪ್ತ ಸ್ನೇಹಿತನಿಗೆ ಹೀಗೆಂದು ಪತ್ರವನ್ನು ಬರೆದ:

'ಪ್ರೀತಿಯ ಗೆಳೆಯ ಬಿಲ್ಲಿ,

ಮುಂದಿನ ಬುಧವಾರ ರಾತ್ರಿ ಒಂಬತ್ತು ಗಂಟೆಗೆ ಸರಿಯಾಗಿ ಲಿಟಲ್ ರಾಕ್‌ನಲ್ಲಿ